ಮೈಸೂರ ಗೆಜೆಟ್.

ನಂ. 23 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1876.

ಬೆಂಗಳೂರು, ಶನಿವಾರ, ಜೂನ್ ತಾ॥ 10, ಸನ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು. .. .. ಪುಟ 87—89

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯುಚ್ಛಾಲೆ ಡೈರೆಕ್ಟರು, ಫಾರೆಸ್ಟ್ ಕನಸರ್‌ವೇಟರು, ಮ್ಯುನಿಸಿಪಲ್ ಬೋರ್ಡುಗಳ ಪ್ರೆಸಿಡೆಂಟರು, ಡಿವಿಜನ್ ಜಾತ್ ಕಮ್ಮಿಷನರುಗಳು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಪೋಲೀಸ್ ಸೂಪರ್‌ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು. .. 269—279

3ನೇ ಭಾಗ—ಇಂಡ್ಯ ಗವರ್ಮೆಂಟಿನ ದುಂತ್ಯಾಲೋಚಕ ಸಭೆಯವರ ಆಕ್ಟುಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

ಸಪ್ಲಿಮೆಂಟ್—ಖುಲ್ಲಾಸೇಯಾದ ಖೈದಿಗಳ ಚಹರೇ ಪಟ್ಟಿ. .. ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ನಂ. 78. ತಾರೀಖು 6ನೇ ಜೂನ್ 1876.

ಮೆಸ್ಸರ್ C. B. ಸಾಂಡರ್ಸ್ C. B. ಸಾಹೆಬರವರು ಆನರೆಬಿಲ್ R. A. ಡಾಲಿಯಲ್ ಸಾಹೆಬರವರಿಂದ ಮೈಸೂರು ವ ಕೊಡಗು ಚೀಫ್ ಕಮ್ಮಿಷನ್ನರ್ ಆಫಿಸ್‌ಗಳ ಚಾರ್ಜನ್ನು ಸನ್ 1876ನೇ ಇಸವಿ ಜೂನ್ 5ನೇ ಮುಕ್ತಂ ಮಧ್ಯಾನ್ಹಕ್ಕೆ ತಗದು ಕೊಂಡರು.

ನಂ. 79. ತಾರೀಖು 2ನೇ ಜೂನ್ 1876.

ಡಾಕ್ಟರ್ ಬೆರ್ನರ್ ಸಾಹೇಬರು 1876ನೇ ಇಸವಿ ಮೇ 16ನೇ ಮತ್ತು ಂ 54ನೇ ನಂಬರ್ ಇಸ್ತಿಹಾರ್‌ನಲ್ಲಿ ತಮಿಗೆ ಕೊಡಲ್ಪಟ್ಟ ಪ್ರಿವಿಲೀಜ್ ರಜಾ 1876ನೇ ಇಸವಿ ಮೇ 18ನೇ ಮತ್ತು ಂ ಮಧ್ಯಾನ್ಹಾತ್ಪರ ಉಪಯೋಗಿಸಿಕೊಂಡರು.

ನಂ. 80. ತಾರೀಖು 2ನೇ ಜೂನ್ 1876.

ಇನಾಂ ಇಲಾಖಾ ಆಫಿಷಿಯೇಟಿಂಗ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ಕಿಟ್ಟೋ ಸಾಹೆಬರಿಗೆ 1876ನೇ ಮೇ 17ನೇ ಮತ್ತು ಂ 56ನೇ ನಂಬರ್ ಇಸ್ತಿಹಾರಿನಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ ಮೆಡಿಕಲ್ ಸರ್ಟಿಫಿಕೇಟ್ ಮೇಲೆ ಮತ್ತೊಂದು ತಿಂಗಳ ರಜಾಕೊಡಲ್ಪಟ್ಟಿರುತ್ತೆ.

ನಂ. 81. ತಾರೀಖು 5ನೇ ಜೂನ್ 1876.

ತರೀಕೆರೆ ತಾಲ್ಲೂಕು ಅಮಲ್ದಾರ್ ವೆಂಕಟರಮಣ್ಯೆಯನ ವರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯಿತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತರೀಕೆರೆ ತಾಲ್ಲೂಕು ಶಿರಸ್ತೇದಾರ್ ಅಣ್ಣಾಜ್ಜೆಯಂಗಾರು, ಐಜ್ಞ ವೆಂಕಟರಮಣ್ಯೆಯನವರ ಗೈರ್‌ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಸದರೀ ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟ್‌ರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 82. ತಾರೀಖು 5ನೇ ಜೂನ್ 1876.

ಚಾಮರಾಜನಗರ ತಾಲ್ಲೂಕು ಅಮಲ್ದಾರ್ ರಘುನಾಥರಾಯರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯಿತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರು ತಾಲ್ಲೂಕು ಹೆಡ್ ಪೇಷ್ಕಾರ್ ಕುಪ್ಪಸ್ವಾಮಿಶೆಟ್ಟಯವರು ಐಜ್ಞ ರಘುನಾಥರಾಯರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ ಆ ತಾಲ್ಲೂಕು 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆ ಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 83. ತಾರೀಖು 6ನೇ ಜೂನ್ 1876.

ಆಷ್ಟಗ್ರಾಮ ತಾಲ್ಲೂಕು ಅಮಲ್ದಾರ್ ಕೊಮಾರಸ್ವಾಮಿ ಮೊದಲ್ಯಾರ್‌ರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯಿತು 6 ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂಜನಗೂಡು ಸಬ್ ಡಿವಿಜ್ಞ ಆಫಿಸ್ ನಾಯಬ್ ಶಿರಸ್ತೇದಾರ್ ತಿರುಮಲಾಚಾರ್ರು, ಐಜ್ಞ ಕೊಮಾರಸ್ವಾಮಿ ಮೊದಲ್ಯಾರ್ರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ 5ನೇ ಗ್ರೇಡ್ ಅಮಲ್ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 84. ತಾರೀಖು 7ನೇ ಜೂನ್ 1876.

2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಹಾಲೀ ವಂಜರಾಬಾದ್ ಸಬ್ ಡಿವಿಜ್ಞ ಚಾರ್ಜ್‌ನಲ್ಲಿರುವ ಮೆಸ್ಟರ್ ನರಸುಂಹಯ್ಯಂಗಾರ್ರ ವರಿಗೆ ಸನ್ 1859ನೇ ಇಸವೀ 13ನೇ ನಂಬರ್ ಆಕ್ಟ್ ಅನುಸರಿಸಿ ಹುಟ್ಟುವ ಮೊಕದ್ದಮೆಗಳನ್ನ ವಿಚಾರಣೆ ಮಾಡತಕ್ಕ ಅಧಿಕಾರ ಮುಖ್ಯವಾಗಿ ಕೊಡಲ್ಪಟ್ಟಿರುತ್ತೆ.

"ಬಮೋಜೀಬ್ ಹುಕ್ಕುಂ."

T. CLARKE,
Offg. Secretary.